ಕತೆ

ರಾಜಕುಮಾರ ಕುಲಕರ್ಣಿ

ಕಲೆ: ಡಿ.ಕೆ. ರಮೇಶ್

# ನಾತಿ ಚರಾಮಿ

ಈಗೀಗ ಪ್ರಭಂಜನನಿಗೆ ತನ್ನ ಮೇಲೆ ಆಸಕ್ತಿ ಕಡಿಮೆಯಾಗುತ್ತಿದ್ದು ಮತ್ತು ಅವನಿಗೆ ಹೀಗಾಗುತ್ತಿರುವುದಕ್ಕೆ ಬೇರೆ ಹೆಣ್ಣಿನ ಸಾಂಗತ್ಯವೇನಾದರೂ ಕಾರಣವಾಗಿರಬಹುದೇ ಎನ್ನುವ ಸಣ್ಣ ಅನುಮಾನವೊಂದು ವಸುಮತಿಯ ಮನಸ್ಸಿನಲ್ಲಿ ಸುಳಿಯಿತು. ಅದು ಕ್ರಮೇಣ ದೊಡ್ಡದಾಗುತ್ತ ಇಡೀ ಕೋಣೆಯನ್ನು ವ್ಯಾಪಿಸಿ, ತನ್ನೆದುರು ಭೂತಾಕಾರವಾಗಿ ಬೆಳೆದು ನಿಂತಂತೆ ಭಾಸವಾದಾಗ ಒಂದು ಕ್ಷಣ ಆಕೆಯ ದೇಹ ಭಯದಿಂದ ಕಂಪಿಸಿ, ಆ ಕೊರೆಯುವ ಚಳಿಯಲ್ಲೂ ಹಣೆ ಮತ್ತು ಕುತ್ತಿಗೆಯ ಸುತ್ತ ಬೆವರೊಡೆದು ನಿಧಾನವಾಗಿ ಹರಿಯುತ್ತ ಎದೆಯ ಸೀಳನ್ನು ಹಾಯ್ದು, ತೊಟ್ಟಿದ್ದ ಬ್ಲೌಜಿನೊಳಗೆ ಇಂಗಲಾರಂಭಿಸಿತು. ಅಂಥದ್ದೊಂದು ಅನುಮಾನ ಮನಸ್ಸಿನಲ್ಲಿ ಸುಳಿದದ್ದೆ ಕುಳಿತಿದ್ದ ವಸುಮತಿ ಧಡಕ್ಕನೆ ಮಂಚದಿಂದೆದ್ದು ಹತ್ತಿರದಲ್ಲಿರುವ ಅಲ್ಮೆರಾಕ್ಕೆ ಅಂಟಿಸಿದ್ದ ಆಳೆತ್ತರದ ನಿಲುವುಗನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನೇ ದಿಟ್ಟಿಸಿ ನೋಡತೊಡಗಿದಳು. ವಿರಳವಾಗುತ್ತಿರುವ ತಲೆಗೂದಲಿನಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ಬೆಳ್ಳಿರೇಖೆಯಂಥ ಎಳೆಗಳು, ಕಣ್ಣಿನ ಕೆಳಗೆ ಕಟ್ಟಿಕೊಳ್ಳುತ್ತಿರುವ ವರ್ತುಲಾಕಾರದ ಕಪ್ಪು, ಕ್ಷೀಣಿಸುತ್ತಿರುವ ಮುಖದ ಮೇಲಿನ ಕಳೆ, ಒಂದೆರಡು ಹಲ್ಲುಗಳುದುರಿ ಅಸ್ಪಷ್ಟವಾಗಿ ಗೋಚರಿಸುತ್ತಿರುವ ಬಲ ಕೆನ್ನೆಯ ಮೇಲಿನ ಕುಳಿ, ಬಿರಿದ ತುಟಿಗಳು, ಸಡಿಲಾಗುತ್ತಿರುವ ಕುತ್ತಿಗೆ ಮತ್ತು ತೋಳಿನ ಸುತ್ತಲಿನ ಚರ್ಮ, ಮಡಿಕೆ ಬೀಳುತ್ತಿರುವ ಹೊಟ್ಟೆ, ಸೊಂಟದ ಸುತ್ತಲೂ ತುಂಬಿಕೊಳ್ಳುತ್ತಿರುವ ಬೊಜ್ಜು ಕಾಣಿಸಿತು. ಒಂದುಕ್ಷಣದ ಮಟ್ಟಿಗೆ ವಸುಮತಿಯ ಮನಸ್ಸಿನಲ್ಲಿ ತಾನು ನೋಡುತ್ತಿರುವುದು ಬೇರೆ ಯಾರದೋ ಪ್ರತಿಬಿಂಬ ಎನ್ನುವ ಭಾವವೊಂದು ಸುಳಿದು ಆ ಭಾವವೇ ಶಾಶ್ವತವಾಗಿರಲಿ ಎಂದೆನಿಸಿತು. ಹಾಗೆ ಕನ್ನಡಿಯಲ್ಲಿನ ತನ್ನ ಪ್ರತಿಬಿಂಬವನ್ನು ದಿಟ್ಟಿಸಿ ನೋಡುತ್ತ ನಿಂತವಳಿಗೆ ಪ್ರಭಂಜನ ಮಾತ್ರವಲ್ಲ ಪ್ರಪಂಚದ ಯಾವ ಗಂಡಸನ್ನೂ ಆಕರ್ಷಿಸುವ ಸೌಂದರ್ಯ ಇನ್ನು ತನ್ನ ಶರೀರಕ್ಕಿಲ್ಲ ಎಂದೆನಿಸಿ ಅಧೀರಳಾದಳು. ದಾಂಪತ್ಯದ ಬದುಕಿನಲ್ಲಿ 'ಶಯನೇಶು ರಂಭಾ' ಎನ್ನುವ ಸೂಕ್ತಿಗೆ ತಾನಿನ್ನು ಹೊರತಾದೆ ಎನ್ನುವ ಭಾವವೇ ಅವಳನ್ನು ಆ ಕ್ಷಣಕ್ಕೆ ಮುತ್ತಿನಿಂತು ಒಂದುರೀತಿ ಶೂನ್ಯ ಆವರಿಸಿದಂತಾಗಿ ಬದುಕಿನ ಬಗ್ಗೆಯೇ ಜಿಗುಪ್ಸೆ ಮೂಡಲಾರಂಭಿಸಿತು.

ವಸುಮತಿಯ ಮನಸ್ಸಿನಲ್ಲಿ ಪ್ರಭಂಜನನ ಬಗ್ಗೆ ಇಂಥದ್ದೊಂದು ಅನುಮಾನ ಮೊಳಕೆಯೊಡೆಯಲು ಕೆಲವು ದಿನಗಳ ಹಿಂದೆ ಆ ದಿನ ರಾತ್ರಿ ಮಲಗುವಾಗ ನಡೆದ ಘಟನೆಯೇ ಕಾರಣವಾಗಿತ್ತು. ನಡೆದದ್ದಿಷ್ಟು – ಎಂದಿನಂತೆ ರಾತ್ರಿ ಊಟದ ನಂತರ ಅಡುಗೆ ಮನೆಯಲ್ಲಿನ ದೀಪಗಳನ್ನಾರಿಸಿ ಬೆಡ್‌ರೂಂಗೆ ಬಂದವಳತ್ತ ಗಮನಕೊಡದೆ ಕೈಯಲ್ಲೊಂದು ಪುಸ್ತಕ ಹಿಡಿದು ಪ್ರಭಂಜನ ಓದುತ್ತ ಕುಳಿತಿದ್ದ. ಈ ಮೊದಲಾದರೆ ಕೈಯಲ್ಲಿ ನೆಪ ಮಾತ್ರಕ್ಕೆ ಪುಸ್ತಕ ಹಿಡಿದು ಕೂಡುತ್ತಿದ್ದವನು ವಸುಮತಿ ಬೆಡ್‌ರೂಂ ಒಳಗೆ ಕಾಲಿಟ್ಟದ್ದೆ ಕೈಯಲ್ಲಿನ